**<u>ದಿಃ17-03-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಪಾಟೀ ಸವಾಲು : 7 ನೇ ಪ್ರತಿವಾದಿಯರ ಪರ ಶ್ರೀ ಕೆ.ಎನ್.ಆರ್ ವಕೀಲರಿಂದಃ</u>**

ನಾನು ಪದವಿ ವ್ಯಾಸಂಗ ಮಾಡಿದ್ದೇನೆ. ನಾನು ದಾವಣಗೆರೆಯ ಕ್ಯಾಮಲಿನ್ ಕಾರ್ಪೊರೇಟ್ ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ಮಾಸಿಕ ರೂ.15,000/- ರಿಂದ ರೂ.20,000/- ವೇತನ ಬರುತ್ತದೆ. ನಾನು 2017 ರಿಂದ ಕೆಲಸ ಬಿಟ್ಟು ಚಿಕ್ಕಜಾಜೂರಿನಲ್ಲಿಯೇ ಇದ್ದೇನೆ. 2016 ರಲ್ಲಿ ನೋಟಿನ ಅಮಾನೀಕರಣ ಆಗಿತ್ತು ಎಂದರೆ ಸರಿ. ನಾನು ಆದಾಯ ತೆರಿಗೆಯನ್ನು ಪಾವತಿ ಮಾಡುತ್ತಿಲ್ಲ. ನಾನು 7 ನೇ ಪ್ರತಿವಾದಿಗೆ ನಗದು ರೂಪದಲ್ಲಿ ರೂ.10 ಲಕ್ಷ ಪಾವತಿಸಿದ್ದೆನು, ಅದನ್ನು 7 ನೇ ಪ್ರತಿವಾದಿಯಿಂದ ನನ್ನ ಖಾತೆಗೆ ಹಾಕಿಸಿಕೊಂಡಿದ್ದೆನು. ನನಗೆ ರೂ.10 ಲಕ್ಷ ವೇತನದಿಂದ ಮತ್ತು ಇತರೆ ಆದಾಯದಿಂದ ಬಂದಿತ್ತು. ನಾನು ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುವುದರೊಂದಿಗೆ ಇತರೆ ಕೆಲಸವನ್ನು ಸಹ ಮಾಡುತ್ತಿದ್ದೆನು. ನಾನು ಕೆಲಸ ಮಾಡುತ್ತಿದ್ದರಿಂದ ಬರುತ್ತಿದ್ದ ಹಣವನ್ನು ನಗದು ರೂಪದಲ್ಲಿ ಕೊಡುತ್ತಿದ್ದರು. ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಹಾಗೂ ಅದರಿಂದ ನಗದು ರೂಪದಲ್ಲಿ ಯಾವುದೇ ಹನವನ್ನು ಸಹ ಪಡೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು 7 ನೇ ಪ್ರತಿವಾದಿ ಪತಿಗೆ ರೂ.10 ಲಕ್ಷ ಹಣವನ್ನು ಪಾವತಿ ಮಾಡಿರುವ ಕುರಿತು ಯಾವುದೇ ದಾಖಲಾತಿ ಇಲ್ಲ. ನಾನು ಯಾವುದೇ ಹಣವನ್ನು ನೀಡದಿದ್ದಾಗ್ಯೂ ಸಹ ಅಕ್ರಮ ಲಾಭವನ್ನು ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಚಿಕ್ಕಜಾಜೂರಿನಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬಂಕ್‌ನ್ನು ಪಾಲುದಾರಿಕೆಯಲ್ಲಿ ನಡೆಸಲು ನಾನು ತೀರ್ಮಾನಿಸಿದ್ದೆನು. ಸದರಿ ವ್ಯವಹಾರಕ್ಕೆ ಸುಮಾರು ರೂ.1 ಕೋಟಿಯಷ್ಟು ಹಣವನ್ನು ವಿನಿಯೋಗಿಸಿದ್ದೆನು ಎಂದರೆ ಸರಿಯಲ್ಲ. ಸದರಿ ಪಾಲುದಾರಿಕೆ ಸಂಸ್ಥೆ ಖಾಸಗಿ ಸಂಸ್ಥೆಯಾಗಿದ್ದು, ಪಾಲುದಾರಿಕೆ ಸಂಸ್ಥೆಯ ಅಡಿಯಲ್ಲಿ ನಡೆಸುತ್ತಿದ್ದೆನು. ಸದರಿ ಪೆಟ್ರೋಲ್ ಬಂಕ್‌ನ್ನು ನಡೆಸಲು ಎಲ್ಲಾ ಪರಿಕರಣಗಳನ್ನು ನಾವೇ ಅಳವಡಿಸಬೇಕು ಎಂದರೆ ಸರಿ. ಸದರಿ ಪೆಟ್ರೋಲ್ ಬಂಕ್‌ನ್ನು ನಡೆಸಲು ರೂ.1 ಕೋಟಿಗಿಂತ ಹೆಚ್ಚು ಹಣವನ್ನು ವ್ಯಹಿಸಿದ್ದೆವು ಎಂದರೆ ಸರಿಯಲ್ಲ. ಆದಾಗ್ಯೂ ನಾನು ಅಷ್ಟು ಹಣವನ್ನು ಭರಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. 1 ನೇ ಪ್ರತಿವಾದಿಯ ಮನವಿಯ ಮೇರೆಗೆ 2 ರಿಂದ 6 ನೇ ಪ್ರತಿವಾದಿಯರು ಎಲ್ಲರೂ ಸೇರಿ ಹಣವನ್ನು ವಿನಿಯೋಗಿಸಿ ನನ್ನ ಹೆಸರಿನಲ್ಲಿ ಪೆಟ್ರೋಲ್ ಬಂಕ್ ನಡೆಸಲು ಸಹಕರಿಸಿರುತ್ತಾರೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ನಮ್ಮ ಸಂಸ್ಥೆಯ ಹೆಸರಿಗೆ ರೂ.7 ಲಕ್ಷ ಮೊತ್ತವನ್ನು ಹಸ್ತಾಂತರಿಸಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯ ಮನವಿಯ ಮೇರೆಗೆ ಗಂಗಮ್ಮ ಮತ್ತು ಆಕೆಯ ಪತಿಯಾದ ರಾಮಲಿಂಗಪ್ಪ ರವರು ಸಹ ನಮ್ಮ ಪೆಟ್ರೋಲ್ ಸಂಸ್ಥೆಗೆ ರೂ.7 ಲಕ್ಷ ಹಣವನ್ನು ಹಸ್ತಾಂತರಿಸಿರುತ್ತಾರೆ ಎಂದರೆ ಸಾಕ್ಷಿ ಅವರ ಮಗ ಜೆ.ಸಿ.ಬಿ. ಕೆಲಸಕ್ಕಾಗಿ ಡೀಸೆಲ್ ಪಡೆದಿದ್ದು, ಈ ಕುರಿತು ಹಣ ನೀಡಿದ್ದರು ಎಂದು ಹೇಳುತ್ತಾರೆ. ಗಂಗಮ್ಮ ಮತ್ತು ರಾಮಲಿಂಗಪ್ಪರವರ ಮಗನಾದ ಅರುಣ್ ಕುಮಾರ್‌ರವರಿಗೆ ಸೇರಿದ ಪೆಟ್ರೋಲ್ ಬಂಕ್ ಮಾದಾಪುರದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಗಂಗಮ್ಮ ಮತ್ತು ರಾಮಲಿಂಗಪ್ಪ ರವರ ಕುಟುಂಬದವರದ್ದೆ ಪೆಟ್ರೋಲ್ ಬಂಕ್ ಇರುವಾಗ ನಮ್ಮ ಪೆಟ್ರೋಲ್ ಬಂಕ್‌ನಲ್ಲಿ ಅವರು ಪೆಟ್ರೋಲ್‌ನ್ನು ಹಾಕಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

4. ನಾನು ಪೆಟ್ರೋಲ್ ಬಂಕ್‌ನ್ನು ಮಾರಾಟ ಮಾಡಿರುತ್ತೇನೆ. ಪೆಟ್ರೋಲ್ ಬಂಕ್‌ನ್ನು ನನ್ನ ಪಾಲುದಾರರು ಮಾರಾಟ ಮಾಡಿದ್ದಾರೆ. ಪೆಟ್ರೋಲ್ ಬಂಕ್‌ನ್ನು ರಾಜಶೇಖರಪ್ಪ ಬಿನ್ ಸಿದ್ದಪ್ಪ, ಚಿಕ್ಕಂದವಾಡಿ ರವರಿಗೆ ರೂ.1,70,00,000/- ಕ್ಕೆ ಮಾರಾಟ ಮಾಡಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ಪೆಟ್ರೋಲ್ ಬಂಕ್ ಮಾರಾಟ ಮಾಡಿರುವ ಬಗ್ಗೆ ಕ್ರಯಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಾಲುದಾರಿಕಾ ಸಂಸ್ಥೆಯ ಇಬ್ಬರು ಪಾಲುದಾರರು ಸಹ ಸಹಿ ಮಾಡದಿದ್ದಲ್ಲಿ ಅಂತಹ ದಾಖಲಾತಿಗೆ ಕಾನೂನಿನ ಮಾನ್ಯತೆ ಇದೆಯಾ ಎಂದರೆ ಸಾಕ್ಷಿ ನಾನು ಪೆಟ್ರೋಲ್ ಬಂಕ್‌ನ್ನು ಸಂಪೂರ್ಣವಾಗಿ ನನ್ನ ಪಾಲುದಾರರಿಗೆ ಬಿಟ್ಟುಕೊಟ್ಟಿದ್ದೆನು ಎಂದು ಹೇಳುತ್ತಾರೆ. ಸದರಿ ಪೆಟ್ರೋಲ್ ಬಂಕ್ ನನ್ನ ಮಾಲೀಕತ್ವ ಮತ್ತು ಸ್ವಾದೀನತೆಯಲ್ಲಿ ಇಲ್ಲ. ನಾನು ಮತ್ತು ನನ್ನ ಪಾಲುದಾರರು ಸೇರಿ ಮಾರಾಟ ಮಾಡಿ ಸ್ವಾದೀನತೆಯನ್ನು ವಹಿಸಿಕೊಟ್ಟಿದ್ದೇವೆ ಎಂದರೆ ಸಾಕ್ಷಿ ನನ್ನ ಪಾಲುದಾರರು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ರೂ.1,70,00,000/- ದ ಪೈಕಿ ನಾನು ಮತ್ತು ನನ್ನ ಪಾಲುದಾರರು ತಲಾ ಅರ್ಧ ಭಾಗವನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಹಣದಿಂದ ನಾನು ಬೇರೆ ಆಸ್ತಿಯನ್ನು ಸಹ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ.

5. ನಾನು2 ರಿಂದ 6 ನೇ ಪ್ರತಿವಾದಿಯರಿಂದ ಹಣವನ್ನು ಪಡೆದುಕೊಂಡಿದ್ದು, ಈಗ ಪುನಃ 7 ನೇ ಪ್ರತಿವಾದಿಯಿಂದ ಅಕ್ರಮ ಲಾಭ ಪಡೆಯಲು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ದಾನ ಪತ್ರ ಮಾಡಿರುವ ಕುರಿತು ನನಗೆ ಸೆಪ್ಟೆಂಬರ್ 2020 ರಲ್ಲಿ ತಿಳಿದಿರುತ್ತದೆ. ನನಗೆ ಸೇರಿದ ಇ.ಮೇಲ್ ಖಾತೆ ಇದೆ. ಶರತ್

ಯಾರು ಎಂದು ನನಗೆ ಗೊತ್ತಿಲ್ಲ. ಶರತ್ 2 ನೇ ಪ್ರತಿವಾದಿಯ ಮಗ ಎಂದರೆ ಸರಿ. ನಾನು ನನ್ನ ಇ-ಮೇಲ್ ಖಾತೆಯಿಂದ ದಿನಾಂಕ 19.03.2016 ರಂದು ಶರತ್ ರವರಿಗೆ ಇ-ಮೇಲ್ ಮಾಡಿರುತ್ತೇನೆ ಎಂದರೆ ನಾನು ಮಾಡಿಲ್ಲ ಎಂದು ಹೇಳುತ್ತಾರೆ. ನಾನು ಶರತ್‌ರವರನ್ನು ಸಹ ಈ ವ್ಯವಹಾರಕ್ಕೆ ಸಂಪೂರ್ಣವಾಗಿ ಬಳಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಶರತ್‌ರವರಿಗೆ ಸೇರಿದ ಕ್ರೆಡಿಟ್ ಕಾರ್ಡಿನಿಂದ ರೂ.7 ಲಕ್ಷ ಸಾಲ ಪಡೆದಿದ್ದೆನು ಎಂದರೆ ಸರಿಯಲ್ಲ. ನಾನು ಸದರಿ ರೂ.7 ಲಕ್ಷ ಹಣವನ್ನು ಪೆಟ್ರೋಲ್ ಬಂಕ್‌ನ್ನು ನಡೆಸಲು ಸಂಸ್ಥೆಗೆ ಬಳಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನನ್ನ ತಂದೆ 2 ರಿಂದ 6 ನೇ ಪ್ರತಿವಾದಿಯರ ಹೆಸರಿಗೆ ಜಾರಿಮಾಡಿಕೊಟ್ಟಿರುವ ದಾನ ಪತ್ರದ ಕುರಿತು ಎಲ್ಲಾ ಮಾಹಿತಿ ಗೊತ್ತಿದ್ದರೂ ಸಹ ನಾನು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ